
(N- Arachidonoylethanolamine) ಎಂಬ ವಸ್ತುವು ಸುಖಕ್ಕೆ ಕಾರಣ. ಈ ವಸ್ತುವಿಗೆ 'ಆನಂದಮೈಡ್' (Anandamide) ಎಂಬ ಪರ್ಯಾಯ ಹೆಸರನ್ನಿಡಲಾಗಿದೆ. ಇಂತಹ ವಸ್ತುವು ದುಃಖಿತರ ದೇಹದಲ್ಲಿ ಅಷ್ಟಾಗಿ ತಯಾರಾಗದು ಎಂದು ಭಾವಿಸಬೇಕಿದೆ. ಆನಂದಮೈಡ್ ಇಲ್ಲವೆಂದರೆ ಆನಂದವಿಲ್ಲ, ನೋವೇ ಎಲ್ಲಾ. ಆತಂಕಗಳ ಸರಮಾಲೆಯಿಂದಾಗಿ ಖಿನ್ನತೆ ಆವರಿಸೀತು!

ಇಂತಹ ವೈಜ್ಞಾನಿಕ ಮಾಹಿತಿಯ ಹಿನ್ನೆಲೆಯಲ್ಲಿ ಸುಬ್ಬು ಹೊಲೆಯಾರ್ ಅವರ 'ದುಃಖ ಆರದ ನೆಲದಲ್ಲಿ' ಕೃತಿಯನ್ನು ಓದಬೇಕಿದೆ. ಅಲ್ಲಿರುವ ಇಪ್ಪತ್ತೊಂದು ಲೇಖನಗಳಲ್ಲಿ ಬಹುತೇಕ ಲೇಖನಗಳು ದುಃಖವನ್ನು ಹೊಮ್ಮಿಸುತ್ತವೆ. ನಮ್ಮ ಮಿದುಳನ್ನು ಹೊಕ್ಕು ಎದೆಗೂಡನ್ನು ತಟ್ಟಿ ಕರುಳನ್ನು ಚುರ್ರೆನಿಸುತ್ತವೆ.

ಸಂಕಲನದ ಮೊದಲನೇ ಲೇಖನದಲ್ಲಿ, ಜೀತಗಾರನ ಹೆಣ ನೋಡಲು ಬಂದ ಗೌಡರು ಹೆಣಕ್ಕೆ ಒದ್ದು ಹೋಗುತ್ತಾರೆ. ಇದನ್ನು ಕಂಡ ಜೀತಗಾರನ ಮಗ ಮತ್ತು ಹಟ್ಟಿಯವರೆಲ್ಲಾ ಇನ್ನಷ್ಟು ದುಃಖಿತರಾಗುತ್ತಾರೆ. ಇಂತಹ ಘಟನೆಯನ್ನು ಜೀತಗಾರನ ಮಗನಿಂದಲೇ ಕೇಳಿದ ಸುಬ್ಬು - 'ಆಕಾಶವನ್ನು ಅಳೆಯಲು ಹೆಜ್ಜೆಗಳನ್ನು ಬಳಸಬೇಡ' ಎಂಬ ಕವಿತೆಯನ್ನು 'ಸುಧಾ' ವಿಶೇಷಾಂಕಕ್ಕೆ ಬರೆದರು. ಕವಿಗೋಷ್ಠಿಯೊಂದರಲ್ಲಿ ಕವನ ಹುಟ್ಟುವಿಕೆಗೆ ಕಾರಣ ತಿಳಿಸಿ ಈ ಕವಿತೆಯನ್ನು ಓದಿದಾಗ, ಲೇಖಕರಾದ ಬಿ.ಎ. ಸನದಿ ಅವರು 'ಸುಬ್ಬು, ನಾನು ನಿನ್ನೊಳಗಿದ್ದೇನೆ' ಎಂದರಂತೆ. ಅದಲ್ಲವೇ ಕಾವ್ಯಕ್ಕಿರುವ ಶಕ್ತಿ, ಮಾನವೀಯತೆ!

ಮುಂಬೈಯಲ್ಲಿ ರಮಾಬಾಯಿ ಅವರೊಂದಿಗೆ ನಾಟಕ ನೋಡಲು ಹೋದ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಅಸ್ಪೃಶ್ಯತೆಯ ಕರಾಳ ಮುಖದ ದರ್ಶನವಾಗುತ್ತದೆ. ನಾಟಕದಲ್ಲಿ ಅಸ್ಪೃಶ್ಯನ ಪಾತ್ರಧಾರಿಯು ಕೊರಳಿಗೆ ಮಡಿಕೆಯನ್ನು, ಸೊಂಟಕ್ಕೆ ಪೊರಕೆಯನ್ನು ಕಟ್ಟಿಕೊಳ್ಳದೆ, ಕಟ್ಟಿಕೊಂಡ ಹಾಗೆ ಅಭಿನಯಿಸುತ್ತಾನೆ. ನಾಟಕ ಮುಗಿದ ಮೇಲೆ ಬಾಬಾಸಾಹೇಬರು ಇದನ್ನು ಪ್ರಶ್ನಿಸಿದಾಗ, ಆ ಪಾತ್ರಧಾರಿಯು ಮೇಲ್ಜಾತಿಯವನಾದ್ದರಿಂದ ತನಗೆ ಅವಮಾನವಾಗುವುದರಿಂದ ಮಡಿಕೆ ಮತ್ತು ಪೊರಕೆಯ ಪರಿಕರಗಳನ್ನು ಕಟ್ಟಿಕೊಳ್ಳಲಿಲ್ಲ ಎಂಬ




ದುಃಖ ಆರದ ನೆಲದಲ್ಲಿ
ಲೇ: ಸುಬ್ಬು ಹೊಲೆಯಾರ್
ಪು: 136
ಬೆ: ರೂ. 160
ಪ್ರ: ಕೌದಿ ಪ್ರಕಾಶನ, ಆನೇಕಲ್
ಫೋನ್: 9008660371

ಉತ್ತರ ಸಿಗುತ್ತದೆ. ಇದನ್ನು ಕೇಳಿದ ಬಾಬಾಸಾಹೇಬರಿಗೆ ಅತೀವ ಬೇಸರವಾಗುತ್ತದೆ. ಇದು ಮತ್ತೊಂದು ಲೇಖನದಲ್ಲಿನ ದುಃಖ.

ಹಾಸನ ಜಿಲ್ಲೆಯ ಸುಬ್ಬು ಹೊಲೆಯಾರ್ ಅವರಿಗೆ ಜಿಲ್ಲೆಯ ಇತಿಹಾಸದ ಬಗ್ಗೆ ಹೆಮ್ಮೆಯಿದೆ. ಜೊತೆಗೆ ಬೇಸರ ಮತ್ತು ದುಃಖವಿದೆ. ಕುವೆಂಪು ಅವರ ಕಾವ್ಯಕ್ಕೆ ಪ್ರೇರಣೆಯಾಗುವ ಹಾಸನ ಜಿಲ್ಲೆಯ ಶಿಲ್ಪಕಲೆ, ಎಂ.ಎಚ್. ಕೃಷ್ಣಯ್ಯನವರು ಶೋಧಿಸಿದ ಹಲ್ಮಿಡಿ ಶಾಸನ, ನಾಲ್ವಡಿಯವರ ಸಾಮಾಜಿಕ ಪ್ರಜ್ಞೆಯಿಂದ ಆರಂಭವಾದ ಪಂಚಮ ವಸತಿ ಶಾಲೆಗಳು, ವಸತಿ ಶಾಲೆಗೆ ಡಾ. ಬಿ.ಆರ್. ಅಂಬೇಡ್ಕರರ ಭೇಟಿ ಮತ್ತು ರಾಜಾರಾವ್, ಗೊರೂರು ರಾಮಸ್ವಾಮಿ